

ಕೈಯೂರಿಕೊಂಡು, ಕಾಲು ಎಳೆದು ಅವರು ನಡೆಯುತ್ತಿದ್ದರು. ಬಹುತೇಕ ಆ ವ್ಯಕ್ತಿಗಳು ಅವರನ್ನು ಬಲವಂತವಾಗಿ ಎತ್ತಿ ಒಯ್ದಂತೆ ಇತ್ತು. ಅವರು ಯಾರು? ರಚನ್‌ಗೆ ಏನು ಮಾಡಿದ್ದಾರೆ?"

"ಚಿಂತೆ ಮಾಡಬೇಡಿ. ನಾವೀಗಲೇ ಅಲ್ಲಿಗೆ ಹೋಗೋಣ."

ಇಕ್ಕೆಲಗಳಲ್ಲಿ ಕಾಡು ಗಿಡಗಳು, ಪೊದೆಗಳು. ಮಧ್ಯದಲ್ಲಿ ಪಾಳು ಕಟ್ಟಡ. ಕಾಂಪೌಂಡಿನಲ್ಲಿ ತುಕ್ಕು ಹಿಡಿದ ಕಬ್ಬಿಣದ ಗೇಟು. ಆವರಣದ ಒಳಗೂ ದಟ್ಟವಾದ ಒರಟು ಪೊದೆಗಳು. ಹಳೆಯ ಕಟ್ಟಡ ಸಾಕಷ್ಟು ಜೀರ್ಣವಾಗಿತ್ತು. ಕರಮಚಂದ ಟಾರ್ಚ್ ಬೆಳಕು ಹರಿಸಿದ. ಸವೆದ ಮರದ ಬಾಗಿಲಿನಲ್ಲಿ ಬೀಗ ನೇತಾಡುತ್ತಿತ್ತು! ಮಾಸಲು ಗಾಜಿನ ಕಿಟಕಿಯ ಮೂಲಕ ಒಳಗೆ ಬೆಳಕು ಹರಿಯಿತು. ಅದು ಹಜಾರ. ಬಿಳಿ ಬಣ್ಣದ ಎಲ್‌ಇಡಿ ಬೆಳಕು ಮೇಲೂ ಕೆಳಗೂ ಆಡಿತು. ಮುರಿದು ಹೋದ ಎರಡು ಕುರ್ಚಿಗಳು, ದೂಳು ತುಂಬಿದ ಮೇಜು... ಎಲ್ಲೆಲ್ಲೂ ಕಾಣುವ ಜೇಡರಬಲೆ. ವಾಸ್ತವ್ಯದ ಸುಳಿವೇ ಇರಲಿಲ್ಲ! ಮುಳ್ಳು ಪೊದೆಗಳೆಡೆಯಲ್ಲಿ ದಾರಿ ಮಾಡಿಕೊಂಡು ನಾವು ಮನೆಗೆ ಒಂದು ಸುತ್ತು ಹೊಡೆದೆವು. ಹಿಂದಿನ ಕದದಲ್ಲಿಯೂ ಬೀಗ ನೇತಾಡುತ್ತಿತ್ತು!

"ಅವರು ಹಿಂದಿನ ಗೇಟಿನ ಮೂಲಕ ಹೋಗಿರಬಹುದೆ?" ಹಿಂಭಾಗದಲ್ಲಿದ್ದ ಅರೆತೆರೆದ ಗೇಟನ್ನು ಉದ್ದೇಶಿಸಿ ನಾನು ಅನುಮಾನ ಹೊರಹಾಕಿದೆ. ಕರಮಚಂದ ಅತ್ತ ಬೆಳಕು ಹರಿಸಿದ. ಪಕ್ಕನೆ ವಸ್ತುವೊಂದು ಮಿನುಗಿತು. ಅನತಿ ದೂರದಲ್ಲಿ ನೆಲದಲ್ಲಿ ಬಿದ್ದ ಕೈ ಗಡಿಯಾರ! ಕರಮಚಂದ ಅದನ್ನೆತ್ತಿಕೊಂಡ.

"ಓಹ್! ಇದು ರಚನ್‌ರ ವಾಚು. ಕೆಲ ದಿನಗಳ ಹಿಂದಷ್ಟೇ ಇವರಿಗೆ ಯಾರೋ ಉಡುಗೊರೆಯಾಗಿ ಕೊಟ್ಟ ವಿದೇಶಿ ಕೈಗಡಿಯಾರ!... ರಚನ್‌ಗೆ ಏನೋ ಆಗಿದೆ. ಅಯ್ಯೋ!" ಸುಭಾಷಿಣಿ ಬಿಕ್ಕಳಿಸಿದಳು.